**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 373/2025

ಸಿ ಡಬ್ಲುಃ 4

ಪಿ ಡಬ್ಲುಃ 3

| | |
|---|---|
| ಸಾಕ್ಷಿದಾರರ ಹೆಸರು | ಮನೋಜ್ |
| ತಂದೆಯ ಹೆಸರು | ಮಂಜು ನಾಗಪ್ಪ ಗೌಡ |
| ವಯಸ್ಸು | 27 |
| ಉದ್ಯೋಗ | ವ್ಯವಹಾರ |
| ವಾಸ್ತವ್ಯ | ಹೊಳ್ಳಕುಳಿ |

ಸಾಕ್ಷಿಯನ್ನು ದಿನಾಂಕ **29-01-2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ನಾನು, ಅಮ್ಮ, ಅಕ್ಕ ಹಾಗೂ ತಂದೆಯವರೊಂದಿಗೆ ವಾಸವಾಗಿದ್ದೇನೆ. ಎರಡು ವರ್ಷಗಳ ಹಿಂದೆ ತಿಮ್ಮಪ್ಪ ರಾಮಾ ಗೌಡ ಇವರ ಬಳಿ ಊರಿನವರೆಲ್ಲರೂ ಸೇರಿ ಅನಾದಿಕಾಲದಿಂದಲೂ ಓಡಾಡಿಕೊಂಡು ಬಂದ ಕಾಲುದಾರಿಯನ್ನು ಬಿಡುವಂತೆ ಕೇಳಿಕೊಂಡರೂ 1 ನೇ ಆರೋಪಿ ಸದರಿ ದಾರಿಯನ್ನು ಬಿಡದೆ ಕಾಂಪೋಂಡ ನಿರ್ಮಿಸಿದ್ದರು. ಆದರೆ 1 ನೇ ಆರೋಪಿಯು ಊರ ಜನರನ್ನು ಚಾಸಾ1 ರವರು ಸೇರಿಸಿದ್ದಾರೆ ಎಂದು ತಿಳಿದು ಚಾಸಾ1 ರವರ ಮೇಲೆ ಸಿಟ್ಟಿನಿಂದ ಇದ್ದರು. ದಿಃ 08-01-2025 ರಂದು ಬೆಳಗ್ಗೆ 9-45 ಗಂಟೆಗೆ ಮನೆಯಿಂದ ಹೈವೆಗೆ ಹೋಗುವಾಗ 1 ಮತ್ತು 2 ನೇ ಆರೋಪಿಯವರು ಚಾಸಾ1 ರವರಿಗೆ ಬೈಯುತ್ತಿದ್ದರು. ಆಗ ನಾವು ಮನೆಯಲ್ಲಿದ್ದೆವು. ಕೂಗಿದ ಶಬ್ಧ ನಮಗೆ ಕೇಳಿದ್ದು, ನಾವು ಹೈವೆ ಕಡೆಗೆ ಹೋದೆವು. ನಮ್ಮ ಜೊತೆಗೆ ಚಾಸಾ5 ಮತ್ತು 6 ರವರು ಘಟನಾ ಸ್ಥಳಕ್ಕೆ ಬಂದರು. ಆ ಸಂದರ್ಭದಲ್ಲಿ ನಮ್ಮ ತಂದೆಯವರಿಗೆ ಆರೋಪಿತರು ಬೋಳಿಮಗನೆ, ಸೂಳೆಮಗನೆ ಎಂದು ಬೈಯುತ್ತಿದ್ದರು. ತದನಂತರ ನಾವು ತಂದೆಯವರಿಗೆ ಸಮಾಧಾನ ಮಾಡಿ ವಾಪಾಸ್ಸು ಕರೆದುಕೊಂಡು ಬಂದೆವು. ನಮ್ಮನ್ನು ಪೊಲೀಸರು ವಿಚಾರಣೆ ಮಾಡಿದ್ದಾರೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃಶ್ರೀ. ವಿ ಆರ್ ಎನ್., ವಕೀಲರಿಂದಃ**

ಆರೋಪಿತರು 2023 ರ ಮಳೆಗಾಲದ ಸಮಯದಲ್ಲಿ ಕಾಲುದಾರಿಯ ಹತ್ತಿರ ಕಾಂಪೋಂಡನ್ನು ಹಾಕಿದ್ದಾರೆ. ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಕಾಂಪೋಂಡ ಹಾಕಿದ್ದಾರೆ ಎಂದರೆ ಉತ್ತರದಿಂದ ದಕ್ಷಿಣಕ್ಕೆ

ಹಾಕಿದ್ದಾರೆ ಎಂದು ನುಡಿದಿರುತ್ತಾರೆ. ಎಷ್ಟು ಮೀಟರ್ ಕಾಂಪೋಂಡ್ ಇದೆ ಗೊತ್ತಿಲ್ಲ. ಹೈವೆಗೆ ತಾಗಿ 8 ಪೂಟ್, ಕೆಳಗಡೆ 8 ಪೂಟ್ ಕಾಂಪೋಂಡ್ ಇದೆ. ಕಾಂಪೋಂಡನ್ನು ಊರಿನವರೆಲ್ಲರೂ ಸೇರಿ ಕಿತ್ತು ಹಾಕಿದ್ದರು. ಆರೋಪಿತರು ನಮ್ಮ ತಂದೆಯ ಮೇಲೆ ಕಂಪ್ಲೇಂಟ್ ಕೊಟ್ಟಿದ್ದರು. ಎರಡು ಬಾರಿ ಕಂಪ್ಲೆಂಟನ್ನು ಕೊಟ್ಟಿದ್ದಾರೆ. ನ್ಯಾಯಾಲಯದಿಂದ ಸ್ಟೇ ಇದೆ ಎಂದು ಗೊತ್ತಿಲ್ಲ. ಪೋಲೀಸರ ಬಳಿ ಆರೋಪಿತರು ಐದು ಅಡಿ ಪೂಟ್ ಬಿಟ್ಟು ಕಾಂಪೋಂಡ್ ಹಾಕಿದ್ದಾರೆ ಎಂದು ಹೇಳಿದ್ದು ಇರುವುದಿಲ್ಲ. ಗಲಾಟೆಯಾಗುವ ಸಂದರ್ಭ ನಾನು ಮನೆಯಲ್ಲಿ ಇದ್ದೆ. ಮನೆಯಿಂದ 50 ಪೂಟ್ ದೂರ ಘಟನೆ ನಡೆದ ಸ್ಥಳ ಇದೆ. ಮನೆಯಲ್ಲಿ ನಾನು, ಅಕ್ಕ, ಅಮ್ಮ ಇದ್ದೆವು. ನಮ್ಮ ತಂದೆಯವರು ಮನೆಯಿಂದ 9-45 ಗಂಟೆಗೆ ಹೊರಟಿದ್ದರು. ತಂದೆಯವರು ಮೇಲೆ ಹೋದ ತಕ್ಷಣ ಗೌಜು ಕೇಳಿತು. ನಾನು ಗೌಜು ಕೇಳಿ ಹೋದಾಗ ಎರಡು ಜನ ಆರೋಪಿತರು ಮತ್ತು ನನ್ನ ತಂದೆ ಇದ್ದರು. ನನ್ನ ಮುಂದೆ ಆರೋಪಿತನು ಬೈಯುತ್ತಿದ್ದನು. ನಾನು, ನಮ್ಮ ತಂದೆಯವರೊಂದಿಗೆ ಮಾತನಾಡುವ ಸಮಯದಲ್ಲಿ ಚಾಸಾ5 ಮತ್ತು 6 ರವರು ಬಂದರು. ಅವರು ಬಂದು ನನ್ನ ಬಳಿ ಏನಾಯಿತು ಎಂದು ಕೇಳಿದರು. ನಾನು ತಂದೆಯನ್ನು ಗಲಾಟೆ ಮಾಡಬೇಡಿ ಎಂದು ಮನೆಗೆ ಕರೆದುಕೊಂಡು ಹೋದೆನು. ತದನಂತರದಲ್ಲಿ ಚಾಸಾ5 ಮತ್ತು 6 ರೊಂದಿಗೆ ಕೂಡಿಕೊಂಡು ನನ್ನ ತಂದೆ ಠಾಣೆಗೆ ತೆರಳಿದರು. ನನ್ನ ಮುಂದೆ ಆರೋಪಿತರು ನನ್ನ ತಂದೆಗೆ ಬೈದಿದ್ದಾರೆ. ನನಗೆ ಆರೋಪಿತರು ಬೈದಿದ್ದು ಇರುವುದಿಲ್ಲ. ಆ ದಿವಸ ಯಾವುದೇ ಘಟನೆ ನಡೆದದ್ದು ಇಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**

**ಹೊನ್ನಾವರ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.**

ಸಿಸಿ ನಂಃ 373/2025

ಸಿ ಡಬ್ಲುಃ 5

ಪಿ ಡಬ್ಲುಃ 4

| | |
|---|---|
| ಸಾಕ್ಷಿದಾರರ ಹೆಸರು | ಮಂಜುನಾಥ ಗೌಡ |
| ತಂದೆಯ ಹೆಸರು | ದೇವು ಗೌಡ |
| ವಯಸ್ಸು | 50 |
| ಉದ್ಯೋಗ | ರೈತಾಪಿ |
| ವಾಸ್ತವ್ಯ | ನಾಜಗಾರ |

ಸಾಕ್ಷಿಯನ್ನು ದಿನಾಂಕ **29-01-2026** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಸ.ಸ.ಅಭಿಯೋಜಕ ರವರಿಂದಃ**

ನಮ್ಮ ಮನೆಯಲ್ಲಿ ನಾನು, ಹೆಂಡತಿ, ಮಗ ಮತ್ತು ಮಗಳು ವಾಸವಾಗಿದ್ದೇವೆ. ನಾನು ಕೂಲಿ ಕೆಲಸ ಮಾಡುತ್ತೇನೆ. ದಿಃ 08-01-2025 ರಂದು 9-45 ಗಂಟೆಗೆ ಮನೆಯಿಂದ ಮಂಕಿ ಠಾಣೆಗೆ ಹೋಗಲು ಹೊರಟಿದ್ದೆವು. ಚಾಸಾ1 ನಮ್ಮ ಸಂಗಡ ಹೋಗುವವರಿದ್ದರು. ನಾನು ರೋಡಿನಲ್ಲಿ ಹೋಗುವಾಗ ಆರೋಪಿತರು ಚಾಸಾ1 ರವರಿಗೆ ಬೈಯುತ್ತಿರುವುದನ್ನು ಕಂಡಿದ್ದೆನು. ಆ ಸಮಯದಲ್ಲಿ ಚಾಸಾ6 ಮತ್ತು ಚಾಸಾ4 ರವರು ಸ್ಥಳದಲ್ಲಿ ಹಾಜರಿದ್ದರು. ಚಾಸಾ1 ರವರ ಮಗ ಬಂದು ಚಾಸಾ1 ರವರ ಬಳಿ ಏನಾಯಿತು ಎಂದು ಕೇಳಿದಾಗ ಚಾಸಾ1 ರವರು ಆರೋಪಿತರು ನನಗೆ ಏಕವಚನದಲ್ಲಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದು ಹೇಳಿರುತ್ತಾರೆ. ನಂತರ ನಾವು ಠಾಣೆಗೆ ಹೋಗಿ ಫಿರ್ಯಾದಿ ದಾಖಲಿಸುವಂತೆ ಹೇಳಿದೆನು. ಈ ಬಗ್ಗೆ ನನ್ನನ್ನು ಪೊಲೀಸರು ವಿಚಾರಣೆ ಮಾಡಿದ್ದರು.

(ಈ ಹಂತದಲ್ಲಿ ಸ.ಸ.ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಸ.ಸ.ಅಭಿಯೋಜಕ ರವರಿಂದಃ**

ನಾವು ಹಿಂದಿನ ಕಾಲದಿಂದಲೂ 1ನೇ ಆರೋಪಿತನ ಜಾಗದಿಂದ ನಡೆದುಕೊಂಡು ಬರುತ್ತಿದ್ದೆವು ಎಂದರೆ ಸರಿ. ಆರೋಪಿತರು ಕಾಲುದಾರಿಯನ್ನು ಬಿಟ್ಟು ಉಳಿದ ಜಾಗದಲ್ಲಿ ಕಾಂಪೋಂಡ್

ನಿರ್ಮಿಸಿಕೊಂಡಿದ್ದಾರೆ ಎಂದರೆ ಸರಿ. ನಾವು ಹಾಗೂ ಊರಿನ ಜನರೆಲ್ಲರೂ 1 ನೇ ಆರೋಪಿಯ ಬಳಿ ಕಾಂಪೋಂಡ ಕಟ್ಟದಂತೆ ಕೇಳಿಕೊಂಡರೂ ಸಹ 1 ನೇ ಆರೋಪಿ ಕಾಂಪೋಂಡ ನಿರ್ಮಿಸಿದ್ದಾರೆ ಎಂದರೆ ಸರಿ. 1 ನೇ ಆರೋಪಿ ಊರಿನ ಜನರನ್ನು ಚಾಸಾ1 ರವರು ಸೇರಿಸಿದ್ದಾರೆ ಎಂದು ಅವರ ಮೇಲೆ ಸಿಟ್ಟಾಗಿದ್ದರು ಎಂದರೆ ಸರಿ.

**ಪಾಟೀ ಸವಾಲುಃಶ್ರೀ. ವಿ ಆರ್ ಎನ್., ವಕೀಲರಿಂದಃ**

ಈ ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಅದಕ್ಕೆ ನನ್ನ ಸಹಿ ತೆಗೆದುಕೊಂಡಿದ್ದಾರೆ. ಫಿರ್ಯಾದಿಯು ಫಿರ್ಯಾದಿ ನೀಡಿದ್ದಾರೆ ಎಂದು ಪೊಲೀಸರು ನನ್ನ ಸಹಿ ತೆಗೆದುಕೊಂಡಿದ್ದಾರೆ. ನಾನು ಪೊಲೀಸರಿಗೆ ಘಟನೆ ನಡೆದ ಬಗ್ಗೆ ಹೇಳಿದ್ದೇನೆ. ನಾನು ಹೋಗುವ ಪೂರ್ವದಲ್ಲಿ ಆರೋಪಿತರು ಹಾಗೂ ಫಿರ್ಯಾದಿ, ಫಿರ್ಯಾದಿಯ ಮಗ ಇದ್ದರು. ನಾನು ಹೋಗುವಾಗ ಆರೋಪಿತರು ಹಾಗೂ ಫಿರ್ಯಾದಿದು ಜಗಳ ಮುಗಿದಿತ್ತು. ನಾನು ಮಂಜು ಗೌಡ ಹೇಳಿದಂತೆ ಪೊಲೀಸರಿಗೆ ಹೇಳಿದ್ದೇನೆ. ನನ್ನ ಮೇಲೆ ಆರೋಪಿತರು ಎರಡು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ನಾನು ಚಾಸಾ1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd/-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**